## ಕರ್ನಾಟಕ ಸರ್ಕಾರ

# ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಎನ್ ತಿಪ್ಪಮ್ಮ ಗಂಡ ಶ್ರೀಎನ್ ರಾಮಪ್ಪ | ಕಂದಾಯ ನಿರೀಕ್ಷಕರು ಕಂಪ್ಲಿ. |

ಪೀಠಿಕೆ:-

ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕು ನಂ.10.ಮುದ್ದಾಪುರ ಗ್ರಾಮದ ಸ.ನಂ.527/1 ವಿಸ್ತೀರ್ಣ 2.10 ಎಕರ ಜಮೀನಿನ ಪಟ್ಟದಾರರಾದ ಎನ್.ರಾಮಪ್ಪ ತಂದೆ ದಿ:ಎನ್ ತಿಪ್ಪಣ್ಣ ಇವರು ದಿನಾಂಕ 13-12-2014 ರಂದು ಮೃತಪಟ್ಟಿರುತ್ತಾರೆ. ಇವರ ಹೆಂಡಿತಿಯಾದ ಶ್ರೀಮತಿ ತಿಪ್ಪಮ್ಮ ಇವರು ಪೌತಿ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡಲು ವಾದಿಗಳು ಈ ಕಾರ್ಯಾಲಯದ ಅರ್ಜಿ ಕಿಯೋಸ್ಕದಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರು ಕಂಪ್ಲಿ ಇವರು ಪ್ರಕ್ರಿಯೆ ಪ್ರಾರಂಭಿಸಲಾಗಿ ನಮೂನೆ-21ನ್ನು ಸಂಬಧಪಟ್ಟವರಿಗೆ ಜಾರಿ ಮಾಡಲು ಹೋದಾಗ ಸದರಿರವರು ಗ್ರಾಮದಲ್ಲಿ ಇರದೇ ಇರುವ ಕಾರಣ ಸದರಿ ಹಕ್ಕುಬದಲಾವಣೆಯನ್ನು ಕಂದಾಯ ನಿರೀಕ್ಷಕರು ತಿರಸ್ಕರಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 09-06-2016 ರಂದು ಆರಂಬಿಸಿ ದಿನಾಂಕ: 18-06-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿ ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ.ವಾದಿಗಳು, ತನ್ನ ಗಂಡನಾದ ದಿವಂಗತ ರಾಮಪ್ಪ ಇವರ ಹೆಂಡತಿಯಾಗಿದ್ದು,ಈ ಬಗ್ಗೆ ಚುನಾವಣಾ ಆಯೋಗದ ಮತದಾರರ ಗುರುತಿನ ಚೀಟಿ ಸಂಖ್ಯೆ ಬಿಎಲ್‌ಸಿ2097640ನ್ನು ಸಲ್ಲಿಸಿರುತ್ತಾರೆ. ಹಾಗೂ ಪೌತಿ ವಾತಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡವಂತೆ ಹೇಳಿಕೆ ನೀಡಿರುತ್ತಾರೆ. ಕಾರಣ ಪೌತಿ ವಾರಸತ್ವ ಪ್ರಕಾರ ಈ ಕೆಳಗಿನಂತೆ.

ಸಂ/ಕಂ/ಪಹಣಿ/ತಕರಾರು/79/2015-16 ದಿನಾಂಕ:14-7-2016

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ವಾಸ್ತಾವಾಂಶ ಹಿನ್ನಲೆ ಯಿಂದಾಗಿ ಹೊಸಪೇಟೆ ತಾಲೂಕಿನ 10 ಮುದ್ದಾಪುರ ಗ್ರಾಮದ ಸ.ನಂ.527/1 ವಿಸ್ತೀರ್ಣ 2.10 ಎಕರೆ ಜಮೀನನ್ನು ಪೌತಿ ವಾರಸತ್ವ ಪ್ರಕಾರ ಶ್ರೀಮತಿ ಎನ್ ತಿಪ್ಪಮ್ಮ ಗಂಡ ಶ್ರೀಎನ್ ರಾಮಪ್ಪ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಲಾಯಿತು.

ಈ ಆದೇಶವು ದಿನಾಂಕ 14-7-2016 ರಂದು ಉಕ್ತಲೇಖನ ನೀಡಿ ತೆರದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು ಹೊಸಪೇಟೆ

ಗೆ

1)ವಾದಿ ಮತ್ತು ಪ್ರತಿವಾದಿ
2) ಭೂಮಿ ಕೇಂದ್ರ
3) ಕಂದಾಯ ಪರಿವೀಕ್ಷಕರು ಕಂಪ್ಲಿ